# INTERNATIONAL INDIAN SCHOOL, DAMMAM
## SUMMATIVE ASSESSMENT– II MARCH 2014 -15
## THIRD LANGUAGE – KANNADA

Marks 90

Class: VII

Time: 3 Hrs.

**General Instructions:**

1. Carefully read the question before answering.
2. All questions must be numbered correctly as in the question paper.

---

I. ಅ) ಸರಿಯಾದ ಪದ ಆರಿಸಿ ಬಿಟ್ಟ ಸ್ಥಳವನ್ನು ತುಂಬಿಸಿರಿ: [1 X 8 = 8]

೧. ಒಂದೇ ಹಪ್ಪಳ , ಊರಿಗೆಲ್ಲಾ ____________ ( ಊಟ, ಕಾಟ, ಕೂಟ )

೨. ಅದು ___________ ಶಿಕ್ಷಣದ ಅವಧಿಯಾಗಿತ್ತು. ( ನೀತಿ, ರೀತಿ, ಪ್ರೀತಿ)

೩. ನೀರಿನ ಪಸೆಯಲಿ ನೆನೆದಿಹ _______ದಲಿ ( ನೆಲ, ಜಲ, ಬಲ)

೪. ಗಿಡವನು _______ ವ ಮಣ್ಣನು ಮುಚ್ಚುವ ( ಹಚ್ಚು, ಹೆಚ್ಚು, ಹುಚ್ಚು)

೫. ಪ್ರತಿ ೮೩ ಮೀಟರ್ ದೂರದಲ್ಲಿ ಒಂದೊಂದು ಬುರುಜನ್ನು __________. ( ಕಟ್ಟಿದ್ದಾರೆ, ಕೊಟ್ಟಿದ್ದಾರೆ, ಬಿಟ್ಟಿದ್ದಾರೆ )

೬. ಉತ್ತರಭಾಗದಲ್ಲಿ ಒಂದು ವಿಶಾಲವಾದ _________ ಪ್ರದೇಶವಿತ್ತು. ( ಗುಡ್ಡಗಾಡು, ಗಿಡ್ಡಗಾಡು, ಗಡ್ಡಗಾಡು )

೭. ಕರ್ನಾಟಕದ ಆಡಳಿತ ಭಾಷೆ _________________ ( ಕನ್ನಡ, ತುಳು, ಕೊಂಕಣಿ )

೮. ದಂಡಿಸು ಪದದ ಅರ್ಥ ______________ ( ನಿರ್ಮಿಸು, ಶಿಕ್ಷಿಸು, ಶಪಿಸು )

ಆ) ಹೊಂದಿಸಿ ಬರೆಯಿರಿ: [ ½ X 10 = 5 ]

| | |
|---|---|
| ೧. ಮಹಾಗೋಡೆ | ಉಪದ್ರವಿಗಳು |
| ೨. ಸಿದ್ಧರಾಮಯ್ಯ | ನೆಡುವ |
| ೩ ಹಾಡುವ | ಸೂಚಿಸಿದರು |
| ೪. ಕರ್ಕಶ | ಬೆಳಕು |
| ೫. ಗೌರವ | ಮುಖ್ಯಮಂತ್ರಿ |
| ೬. ಗೆಳೆಯರೆ | ೨೪೦೦ ಕಿ.ಮೀ. |
| ೭. ದೀಪದ | ಬನ್ನಿರಿ |
| ೮. ಹೂಣರು | ಪ್ರಶಸ್ತಿ |
| ೯. ಗಿಡ | ಆಸೆ |
| ೧೦. ಪದಕ | ಸ್ವರ |

ಇ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: [ 1 X 4 = 4 ]

1) 48 2) 36 3) 50 4) 12

II. ಅ) ಈ ಕೆಳಗಿನ ಹತ್ತು ಪದಗಳ ಅರ್ಥ ಬರೆಯಿರಿ: [ ½ X 10 = 5 ]

೧. ಯಜಮಾನ ೨. ಅಭಿಪ್ರಾಯ ೩. ಮೆಲ್ಲು ೪. ಬಸಿರು ೫. ಬಾನು ೬. ಕಂಪು
೭. ಕೊರಡಿ ೮. ನಿಪುಣರು ೯. ಅಧೀನ ೧೦. ಮುಗ್ಧಜನ ೧೧. ಭೂದೇವಿ ೧೨. ಪರಾರಿ

ಆ) ಈ ಪದಗಳ ಐದು ವಿರುದ್ಧ ಪದ ಬರೆಯಿರಿ: [ 1 X 5 = 5 ]

೧. ಸಂಭವ ೨. ನಿಜ ೩. ಸರಳ ೪. ಪ್ರಶ್ನೆ ೫. ಬನ್ನಿರಿ ೬. ನಗು

ಇ) ಈ ಕೆಳಗಿನ ಐದು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ: [ 1 X 5 = 5]

೧. ಗೆಳೆಯ   ೨. ಭೂಮಿ   ೩. ಶಿಕ್ಷಕರು   ೪. ಚಂದ್ರ   ೫. ಮಲ್ಲ   ೬.ಪಂದ್ಯ

ಈ) ಬಿಟ್ಟ ಸ್ಥಳ ತುಂಬಿಸಿರಿ/ ವಾಕ್ಯ ಪೂರ್ತಿಗೊಳಿಸಿರಿ: [ 1 X 6 = 6 ]

೧. ಕುಸ್ತಿಯಲ್ಲಿ ನೀವು ಸೋಲುವ __________ವೇ ಹೆಚ್ಚು.

೨. ಆ ಮಲ್ಲರು _________ ಬಲದ ಶರೀರದವರಾಗಿದ್ದರು.

೩. ಚಕ್ರವರ್ತಿಯು ಗೋಡೆ ನಿರ್ಮಾಣದ ಕೆಲಸಕ್ಕಾಗಿ ______________ ಮಂದಿಯನ್ನು ನೇಮಿಸಿದನು.

೪. ಚೈನಾದಲ್ಲಿ ಒಂದು __________ವಾದ ತಡೆಗೋಡೆ ನಿರ್ಮಿಸಬೇಕು.

೫. ಅಲ್ಲಿ ಹೂಣ ಎಂಬ ಜಾತಿಯ __________ ____________.

೬. ____________ಅವನು ಸುಮಾರು ಮೂವತ್ತಾರು ರಾಜ್ಯಗಳನ್ನು ಜಯಿಸಿದನು.

III. ಅ) ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ. [1 X 3 = 3]

೧. ಗಾಯನ, ಸಂಗೀತ, ಲಾಡು, ಹಾಡು

೨. ಅಪಾಯ, ಉಪಾಯ, ಯುಕ್ತಿ, ತಂತ್ರ

೩. ಕತ್ತೆ , ನಾಯಿ, ನರಿ , ಕೋಳಿ

ಆ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ: [ 1 X 4 = 4 ]

೧. ಅವಳು   ೨. ಎಲ್ಲಿ   ೩. ಮನರಂಜನೆ   ೪. ಉಪಾಯ   ೫. ಅವಶ್ಯಕತೆ

ಇ) ಈ ವಾಕ್ಯಗಳ ಲಿಂಗ ಮತ್ತು ವಚನ ಬರೆಯಿರಿ: [ ½ X 6 = 3 ]

೧. ಅವನು ಶಾಲೆಗೆ ಹೋಗುತ್ತಾನೆ. _________ ___________

೨. ಹದ್ದುಗಳು ಬಹಳ ಎತ್ತರದಲ್ಲಿ ಹಾರುತ್ತವೆ. _____ ___________

೩. ರೈತನು ಹೊಲದಲ್ಲಿ ದುಡಿಯುತ್ತಾನೆ. _________ _________

ಈ) ಕೆಳಗಿನ ಪದಗಳ ಲಿಂಗ ಬದಲಾಯಿಸಿ: [ ½ x 4 = 2 ]

೧. ಗೆಳೆಯ   ೨. ತಮ್ಮ   ೩.ಅಕ್ಕ   ೪. ಅಮ್ಮ

IV. ಅ) ಕೆಳಗಿನ ಪದ್ಯಭಾಗವನ್ನು ಪೂರ್ತಿಗೊಳಿಸಿರಿ. ಕವಿಯ ಹೆಸರನ್ನು ಬರೆಯಿರಿ: [ 5 marks ]

ಭೂಮಿಗೆ __________ __________ ____________

________________ ಹಸಿರು

__________ __________ __________ __________

____________ ಬಸಿರು

ಕವಿ ____________________

ಆ) ಮಾದರಿಯಂತೆ ಬರೆಯಿರಿ: [ ½ x 4 = 2 ]

**ಮಾದರಿ: [ ಹಣಿಸುವ - ಹಣಿಸೋಣ ]**

೧. ಓದುವ   ೨. ನೋಡುವ   ೩. ಹಚ್ಚುವ   ೪. ತೋಡುವ

ಇ) <u>ಕೆಳಗಿನ ವಾಕ್ಯಗಳಲ್ಲಿರುವ ಸರ್ವನಾಮವನ್ನು ಗುರುತಿಸಿ:</u> [ 1 X 3 = 3 ]

೧. ಕತ್ತೆ ಮತ್ತು ನರಿ ಗೆಳೆಯ ಪ್ರಾಣಿಗಳು. ಅವು ಹಳ್ಳಿಯ ಮಾರ್ಗದಲ್ಲಿ ಹೋಗುತ್ತಿದ್ದವು.

೨. ರೈತನು ಕಷ್ಟಜೀವಿ. ಅವನು ಹೊಲದಲ್ಲಿ ದುಡಿಯುತ್ತಾನೆ.

೩. ಅವರು ಶಾಲೆಗೆ ಹೋಗುತ್ತಾರೆ.

ಈ) ಕೆಳಗಿನ ವಾಕ್ಯಗಳಿಗೆ ಪ್ರಶ್ನೆ ರೂಪ ಬರೆಯಿರಿ: [ 1 X 2 = 2 ]

೧. ತೋಟದ ಯಜಮಾನ ದೊಣ್ಣೆ ಹಿಡಿದು ಓಡಿ ಬಂದನು.

೨. ಕತ್ತೆಯು ಕರ್ಕಶ ಧ್ವನಿಯಲ್ಲಿ ಹಾಡತೊಡಗಿತು.

V. ಅ) ಒಂದು ವಾಕ್ಯದಲ್ಲಿ ಹತ್ತು ಪ್ರಶ್ನೆಗಳನ್ನು ಉತ್ತರಿಸಿರಿ: [1 X 10 = 10]

೧. ಕತ್ತೆ ಮತ್ತು ನರಿ ತೋಟದಲ್ಲಿ ಏನನ್ನು ಮೆಲ್ಲತೊಡಗಿದವು?

೨. ಗೆಳೆಯರು ಗಿಡಗಳ ಆರೈಕೆ ಹೇಗೆ ಮಾಡುತ್ತಾರೆ?

೩. ಹೊಟ್ಟೆ ತುಂಬಿದ ಮೇಲೆ ಕತ್ತೆಗೆ ಯಾವ ಆಸೆಯಾಯಿತು?

೪. ಗಿಡಗಳು ಚಿಗುರಿ ಎಷ್ಟು ಎತ್ತರಕ್ಕೆ ಬೆಳೆಯಬೇಕು?

೫. ಒಗಟು ಎನ್ನುವ ಪದ ಯಾವ ಯಾವ ಪದಗಳಿಂದ ಆಗಿದೆ?

೬. ಮಕ್ಕಳು ಎದ್ದು ನಿಂತು ಯಾರಿಗೆ ಗೌರವ ಸೂಚಿಸಿದರು?

೭. ರಾಮಕೃಷ್ಣನು ರಾತ್ರಿ ಯಾರ ಬಿಡಾರಕ್ಕೆ ಹೋದನು?

೮. ಮಲ್ಲರು ಶಿಷ್ಟಾಚಾರದಂತೆ ಏನು ಮಾಡಿದರು?

೯. ಗುಡ್ಡಗಾಡು ಪ್ರದೇಶದಲ್ಲಿ ಯಾರು ವಾಸವಾಗಿದ್ದರು?

೧೦. ಚಿನ್ ಶಿಹ್ ಹ್ವಾಂಗ್‌ತಿ ಎಂಬುವನು ಯಾರು?

೧೧. ಕತ್ತೆ ಮತ್ತು ನರಿ ಯಾವ ಮಾರ್ಗದಲ್ಲಿ ಹೋಗುತ್ತಿದ್ದವು?

೧೨. ಗೆಳೆಯರು ಏನನ್ನು ತರುತ್ತಾರೆ?

ಆ) ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡನ್ನು ಉತ್ತರಿಸಿರಿ: [ 1 ½ X 2 = 3 ]

೧. ಚೈನಾದೇಶದ ಚಕ್ರವರ್ತಿಯು ಏನೆಂದು ದೃಢ ಸಂಕಲ್ಪ ಮಾಡಿದನು?

೨. ಕಡೆಗೆ ತೋಟದ ಯಜಮಾನನು ಏನು ಮಾಡಿದನು?

೩. 'ಜಾನಪದ ಸಾಹಿತ್ಯ' ಎಂದರೇನು?

ಇ) ಎರಡು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: [ 2 ½ X 2 = 5 ]

೧. ಮಹಾಗೋಡೆಯು ನಿರ್ಮಾಣಗೊಂಡ ಮೇಲೆ ಏನಾಯಿತು?

೨. ನೆರೆ ರಾಜ್ಯದ ಮಲ್ಲರು ಏನೇನು ಧರಿಸಿದ್ದರು?

೩. ಕಲ್ಲಂಗಡಿ ಹಣ್ಣನ್ನು ಸೂಚಿಸುವ ಒಗಟು ಯಾವುದು?

೪. ಮೂರನೆಯ ಮಲ್ಲನು ಕೃಷ್ಣದೇವರಾಯನಲ್ಲಿ ಏನೆಂದು ಪ್ರಾರ್ಥಿಸಿದನು?

VI. ಕೆಳಗಿನ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ:

'ಮಾಸ್ತಿ ಕನ್ನಡದ ಆಸ್ತಿ ' ಎಂದು ಪ್ರಖ್ಯಾತರಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ ಜೂನ್ ೬ ೧೮೯೧ ರಲ್ಲಿ ಜನಿಸಿದರು. ಅವರು ಹುಟ್ಟುವ ಕಾಲಕ್ಕೆ ಮನೆಯಲ್ಲಿ ಬಡತನವಿತ್ತು. ಒಂದು ಕಾಲಕ್ಕೆ ಶ್ರೀಮಂತಿಕೆಯಿಂದ ವಿಜೃಂಭಿಸಿದ ಕುಟುಂಬ ಅವರ ಪೂರ್ವಿಕರದು. ಮಾಸ್ತಿ ವೆಂಕಟೇಶ ಅಯ್ಯಂಗಾ ರ್ "ಪೆರಿಯಾತ್" ಎಂದರೆ ದೊಡ್ಡ ಮನೆಯವರು. ಅವರ ವಿದ್ಯಾಭ್ಯಾಸ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಜರುಗಿತು.ಹೊಂಗೇನಳ್ಳಿ, ಯಲಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರು, ಮದರಾಸು ಹೀಗೆ ನಾನಾ ಕಡೆಗಳಲ್ಲಿ ತಮ್ಮ ಬಂಧುಗಳ ನೆರವಿನಿಂದ ವಿದ್ಯಾಭ್ಯಾಸ ಮಾಡಿ ಎಂ.ಎ ಪದವಿ ಗಳಿಸಿದರು. ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಮಾಸ್ತಿ ಯಾವ ಪರೀಕ್ಷೆಯಲ್ಲೂ ಪ್ರಥಮ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡಲಿಲ್ಲ. ಸಾಹಿತ್ಯ ರಚನೆ ಅವರ ಪ್ರವೃತ್ತಿಯಾಗಿ ಬೆಳೆಯಿತು. ಮೆಟ್ರಿಕ್ಯುಲೇಷನ್(೧೯೦೭), ಎಫ್.ಎ (೧೯೦೯), ಬಿ.ಎ (ಮದರಾಸು ವಿಶ್ವವಿದ್ಯಾಲಯ ೧೯೧೨), ಮೈಸೂರು ಸಿವಿಲ್ ಸರ್ವಿಸ್ (೧೯೧೩), ಎಂ.ಎ (ಮದರಾಸು ವಿಶ್ವವಿದ್ಯಾಲಯ ೧೯೧೪) ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ, ೧೯೧೪ ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ೧೯೧೪ ರಿಂದ ೧೯೪೩ ರವರೆಗೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿವೃತ್ತರಾದರು. ೧೯೨೦ ರಲ್ಲಿ ಅವರ ಮೊದಲ ಪುಸ್ತಕ ಕೆಲವು ಸಣ್ಣ ಕಥೆಗಳು ಪ್ರಕಟಗೊಂಡಿತು. ಸಣ್ಣಕತೆ, ನೀಳ್ಗತೆ, ಕಾದಂಬರಿ, ಕಾವ್ಯ, ನಾಟಕ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ, ಸಂಪಾದನೆ, ಅನುವಾದ - ಹೀಗೆ ಕನ್ನಡ ಸಾಹಿತ್ಯದ ಪ್ರತಿಯೊಂದು ಕ್ಷೇತ್ರಕ್ಕೂ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ೧೯೮೩ ರಲ್ಲಿ ಚಿಕವೀರ ರಾಜೇಂದ್ರ ಕಾದಂಬರಿಗಾಗಿ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಮಾಸ್ತಿಯವರು ಕನ್ನಡಕ್ಕೆ ನಾಲ್ಕನೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟರು. ಜೀವನ ಪರ್ಯಂತ ಕನ್ನಡ ಸೇವೆಯನ್ನು ಮಾಡಿದ ಮಾಸ್ತಿಯವರು ಜೂನ್ ೬ ೧೯೮೬ ರಂದು ನಿಧನ ಹೊಂದಿದರು.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: [ 1 X 10 = 10 ]

೧. ಮಾಸ್ತಿ ಯಾವ ಹೆಸರಿನಿಂದ ಪ್ರಖ್ಯಾತರಾಗಿದ್ದರು?

೨. ೧೯೮೩ ರಲ್ಲಿ ಅವರ ಯಾವ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಪಡೆದರು?

೩. ಅವರ ಮೊದಲ ಪುಸ್ತಕ ಯಾವುದು?

೪. ಮಾಸ್ತಿ ವೆಂಕಟೇಶ ಅಯ್ಯಂಗಾರರು ಎಲ್ಲಿ ಮತ್ತು ಯಾವಾಗ ಜನಿಸಿದರು?

೫. ಪೆರಿಯಾತ್ ಎಂದರೆ ____________________.

೬. ಮಾಸ್ತಿಯವರು ಕನ್ನಡಕ್ಕೆ ____________ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟರು.

೭. ಮಾಸ್ತಿಯವರು ಯಾವಾಗ ನಿಧನ ಹೊಂದಿದರು?

೮. ಶ್ರೀಮಂತಿಕೆಯಿಂದ ವಿಜೃಂಭಿಸಿದ ಕುಟುಂಬ ಅವರ ಪೂರ್ವಿಕರದು. (ಸರಿ/ ತಪ್ಪು)

೯. ಅವರು ಯಾರ ನೆರವಿನಿಂದ ವಿದ್ಯಾಭ್ಯಾಸ ಮಾಡಿ ಎಂ.ಎ ಪದವಿ ಗಳಿಸಿದರು?

೧೦. ೧೯೧೪ ರಲ್ಲಿ ಮೈಸೂರು ಸರ್ಕಾರದಲ್ಲಿ __________________ರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು.

............... ಮುಕ್ತಾಯ ...............